ಬಿದ್ದಂತಾಗಿದೆ. ಹೈನುಗಾರಿಕೆಯ ಜೀವನಮಾರ್ಗವೆಂದು ನಂಬಿರುವವರಿಗೆ ಬಹಳ ತೊಂದರೆಯಾಗುತ್ತಿದೆ. ಈ ರೀತಿಯಲ್ಲಿ ಇದು ಸಾರ್ವಜನಿಕ ಮಹತ್ವದ ಜರೂರು ವಿಷಯವಾದ್ದರಿಂದ ಸದನದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—ಬೆಂಗಳೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬೆಂಗಳೂರು ಇದರ ಕಾರ್ಯವ್ಯಾಪ್ತಿಯಲ್ಲಿ ಡಿಸೆಂಬರ್ ೧೯೮೬ರ ಅಂತ್ಯಕ್ಕೆ ೯೪೦ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಘಗಳ ಮೂಲಕ ಸುಮಾರು ೫.೮೬ಲಕ್ಷ ಕೆ. ಜಿ. ಹಾಲನ್ನು ದಿನವೊಂದಕ್ಕೆ ಸಂಗ್ರಹಿಸಲಾಗುತ್ತಿದೆ. ಈ ಸಂಘಗಳಲ್ಲಿ ೧,೫೫,೧೪೯ ಜನ ಸದಸ್ಯರಿದ್ದು, ಈ ಒಕ್ಕೂಟದ ಕಾರ್ಯವ್ಯಾಪ್ತಿಯಲ್ಲಿ ಹಾಲು ಉತ್ಪಾದಕರಿಗೆ ವಾರ ಒಂದಕ್ಕೆ ಅಂದಾಜು ರೂ. ೬೦-೦೦ ಲಕ್ಷದಿಂದ ೧೦೦-೦೦ ಲಕ್ಷಗಳಷ್ಟು ಹಣವನ್ನು ಹಾಲು ಉತ್ಪಾದಕರಿಗೆ, ಒಕ್ಕೂಟದವರು ಸಂಘಗಳ ಮುಖಾಂತರ ಬಟವಾಡೆ ಮಾಡುತ್ತಾರೆ. ಆರ್ಥಿಕ ಮುಗ್ಗಟ್ಟಿನಿಂದಾಗಿ ವಾರಕ್ಕೆ ಒಂದಾವರ್ತಿ ಹಣವನ್ನು ಸಂದಾಯ ಮಾಡುವುದು ಈಗ ಕಷ್ಟವಾಗುತ್ತಿದೆ. ಹಾಲು ಉತ್ಪಾದಕರಿಗೆ ಈಗಾಗಲೇ ದಿನಾಂಕ ೭-೧-೧೯೮೭ ರವರೆಗೆ ಸಿಗದಿತ ಹಾಲಿನ ಬೆಲೆಯನ್ನು ಸಂದಾಯ ಮಾಡಲಾಗಿದೆ. ಈಗ ಸುಮಾರು ರೂ. ೧೫೬.೬೬ ಲಕ್ಷ ರೂಪಾಯಿಗಳಷ್ಟು ಹಣವನ್ನು ಹಾಲು ಉತ್ಪಾದಕರಿಗೆ ಕೊಡಬೇಕಾಗಿದ್ದು, ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಲಿಯು, ಈ ವಿಷಯವಾಗಿ ವೀಕ್ಷ್ಯವಾಗಿ ಹಣ ಒದಗಿಸಲು ಸರ್ವ ಪ್ರಯತ್ನ ಮಾಡುತ್ತಿದೆ.

(೧೦) ಪೋಲೀಸ್ ಸ್ಟೇಷನ್‌ಗಳಿಗೆ ಸ್ಟೇಷನರಿ ಸಾಮಾನುಗಳನ್ನು ಸರಿಯಾಗಿ ಸರಬರಾಜು ಮಾಡದಿರುವುದು.

ಶ್ರೀ ವೇದಾಂತ ಹೆಮ್ಮಿಗೆ.—ಕರ್ನಾಟಕದಲ್ಲಿರುವ ಪೋಲೀಸ್ ಸ್ಟೇಷನ್‌ಗಳಲ್ಲಿ ಬರೆಯುವ ಕಾಗದ, ಪೆನ್ಸಿಲ್, ಶಾಯಿ ಹಾಗೂ ಇತರೆ ಸ್ಟೇಷನರಿ ಸಾಮಾನುಗಳನ್ನು ಪೋಲೀಸರೇ ಕಳೆದ ಹಲವಾರು ವರ್ಷಗಳಿಂದ ಕೈಯಿಂದ ಹಣ ಹಾಕಿಕೊಳ್ಳಬೇಕಾಗಿದೆಯೆಂದೂ ಇದಕ್ಕಾಗಿ ಸರ್ಕಾರವು ಯಾವ ಹಣವನ್ನು ಮಂಜೂರು ಮಾಡುತ್ತಿಲ್ಲವೆಂದೂ ತಿಳಿದು ಬಂದಿದೆ. ನಿಜವಾಗಲೂ ಇದು ಆಶ್ಚರ್ಯಕರ ಹಾಗೂ ವಿಷ್ಯಯ ಉಂಟು ಮಾಡುವ ಸಂಗತಿ. ಆಯವ್ಯಯದಲ್ಲಿ ಸ್ಟೇಷನ್‌ಗಳಿಗೆ ಕಳೆದ ವಾರಿ ಸ್ಟೇಷನರಿ ಕೊಳ್ಳಲು ಪೋಲೀಸ್ ಇಲಾಖೆಯು ಸ್ಟೇಷನ್‌ಗಳಿಗೆ ಕಳೆದ ವಾರಿ ಒಟ್ಟು ಮಂಜೂರು ಮಾಡಿದ ಹಣವೆಷ್ಟು ? ವರ್ಷಕ್ಕೆ ಪ್ರತಿ ಸ್ಟೇಷನ್‌ಗೂ ಎಷ್ಟು ಹಣ ಕೊಟ್ಟಿದ್ದೀರಿ ? ಇದುವರಿಗೂ ಈ ವ್ಯವಸ್ಥೆ ಆಗದಿದ್ದರೆ ಇನ್ನು ಮುಂದಾದರೂ ಸ್ಟೇಷನರಿ ಕೊಳ್ಳಲು ಪೋಲೀಸ್ ಸ್ಟೇಷನ್‌ಗಳಿಗೆ ಹಣ ಮಂಜೂರು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಈ ಪ್ರಶ್ನೆ ಬಂತು. ಆದಕ್ಕೋಸ್ಕರ ವಿವರವಾದ ಹೇಳಿಕೆಯನ್ನು ಕೊಡುವುದಕ್ಕೆ ಆಗಲಿಲ್ಲ. ಬಜೆಟ್‌ನಲ್ಲಿ ಎಷ್ಟು ಹಣ ಒದಗಿಸಲಾಗಿದೆಯೆಂದು ಕೇಳಿರುವುದರಿಂದ, ಮುಂದಿನ ಬಜೆಟ್‌ನಲ್ಲಿ ನಿಲ್ಲವನ್ನು ಸೇರಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ನಾನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಇಲ್ಲಿ ಬಂದಿಲ್ಲ, ಮತ್ತೊಂದು ಕೊಡಿ.

(೧೧) ಪ್ರಾಂಗಳೂರಿನ ಬೆಂಗರೆಯಲ್ಲಿ ಮನೆ ಕಟ್ಟುವಲು ಲೈಸೆನ್ಸ್ ನೀಡದಿರುವವರಿಗೆ ಲೈಸೆನ್ಸ್ ಕೊಡುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮೀನುಗಾರರ ಕ್ಷೇತ್ರದ ಬೆಂಗರೆಯಲ್ಲಿ ಸುಮಾರು ಪೂರ್ತಿ ನಾವಿಕರ್ಕೂ ಮೀಕ್ಕಿ ಮೀನುಗಾರರು, ಅಲ್ಪಸಂಖ್ಯಾತ ಬಡ ಮುಸ್ಲಿಮರು ಹೆಚ್ಚಾಗಿರುತ್ತಾರೆ. ವಿಳ್ಳಶಾ ಧಿನಿತ್ಯ ದುಡಿದು ಜೀವನವ ಬಡವರು. ಇಲ್ಲಿ ಅನೇಕ ಮೀನುಗಾರರು, ಮುಸ್ಲಿಮರು ಮನೆ ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಈ ಬಾಬ್ತು ಒಂಕ್ಕೂ ಮೀಕ್ಕಿದ ಬಡವರಿಗೆ ಪಟ್ಟಣ ಪಂಚಾಯತಿನ ಅಧಿಕಾರಿಗಳು ಮನೆ ಕಟ್ಟಿಕೊಂಡ ಬಗ್ಗೆ ಲೈಸೆನ್ಸ್ ಕೊಡದೆ ಅನಾವಶ್ಯಕ ತೊಂದರೆ ಕೊಡುತ್ತಿದ್ದಾರೆ. ಈ ವಿಷಯವನ್ನು ಹಿಂದಿನ ಮೀನುಗಾರಿಕಾ ಸಚಿವರಿಗೂ, ಈ ಹಿಂದೆ ಮೈಂಗಳೂರಿಗೆ ಒಂದಾಗ ಬಂದಿನ ಪಟಪರಾದ ಶಾಸಿಗೂ ವಿವೇದಿಸಿ

ಕೊಂಡಾಗ ಅದನ್ನು ಮಾಡಿಸೋಣ ಎಂದಿದ್ದೀರಿ. ಆದರೆ ಅಧಿಕಾರಿಗಳು ಸತಾಯಿಸುತ್ತಲೇ ಬಂದು ಮನೆಗಳನ್ನು ಕೆಡುವುತ್ತಿದ್ದಾರೆ. ಅದಕಾರಣ ಬೆಂಗರೆಯಲ್ಲಿ ಮನೆ ಕಟ್ಟಿಕೊಂಡು ಲೈಸೆನ್ಸ್ ನೀಡದೆ ಇರುವ ಬಡ ಮೊಗವೀರರಿಗೆ ಕೂಡಲೇ ಲೈಸೆನ್ಸ್ ಕೊಡಿಸುವಂತೆ ಮಾಡುವುದು ಅತಿ ಅಗತ್ಯ. ಈ ಕುರಿತು ಮೊಗವೀರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಇವರ ಬಗ್ಗೆ ಉತ್ತರ ಕೊಡುತ್ತೇನೆ. ಅದು ಈ ರೀತಿ ಇದೆ.

ಮಂಗಳೂರು ಬಂದರಿನ ಬೆಂಗ್ರೆಯ (ತೆಗ್ಗಣಾದಿಂದ ತಣ್ಣೀರುಬಾವಿವರೆಗಿನ) ಬಂದರು ಭೂಮಿಯನ್ನು ಯಾರಿಗೆ ಆಗಲಿ ಮಂಜೂರು ಮಾಡಬಾರದೆಂದು ಸರ್ಕಾರ ಜೂನ್ ೧೯೬೧ ರಂದು ಆದೇಶ ನೀಡಿದ್ದರೂ ೧೯೬೩ ಮೇ ತಿಂಗಳಲ್ಲಿ ಮಳೆಗಾಲದ ಮುನ್ನ ಬಂದರು ಭೂಮಿಯಲ್ಲಿ ಬಹಳಷ್ಟು ಜನ ಅಕ್ರಮವಾಗಿ ಜಾಗವನ್ನು ಅಕ್ರಮಿಸಿಕೊಂಡಿದ್ದಾರೆ. ಸುಮಾರು ೨೦೦ಕ್ಕೂ ಮೇಲ್ಪಟ್ಟು ಪಕ್ಕಿ ಜಾಗಗಳು ಮತ್ತು ಇತರ ಕಟ್ಟಡಗಳು ಇಲ್ಲಿ ನಿರ್ಮಿಸಲಾಗಿದ್ದು ಈ ಜಾಗವನ್ನು ಪರಿಶೀಲಿಸಿ ಈ ಕಳಕಂಡಂತೆ ತೀರ್ಮಾನಿಸಲಾಯಿತು.

ಮಂಗಳೂರು ಬೆಗ್ರೆ ಬಂದರು ಭೂಮಿಯಲ್ಲಿ ಈಗ ಇರುವ ಬೀಡುಗಳನ್ನು ಹಾಗೆ ಬಿಡಲು; ಅನುಮತಿ ನೀಡಬೇಕು ಮತ್ತು ಈ ಭೂಮಿಯಲ್ಲಿ ಇನ್ನೂ ಖಾಲಿ ಜಾಗವು ಉಳಿದರೆ ಬೇರೆ ಜಾಗಗಳಲ್ಲಿನ ಅನಧಿಕೃತ ಅತಿಕ್ರಮಣಗಳನ್ನು ತೆಗೆಯಿಸಿ ಅವರಿಗೆ ಈ ಬೀಡುಗಳ ಮಧ್ಯದಲ್ಲಿನ ಉಳಿದ ಖಾಲಿ ಜಾಗಗಳನ್ನು ಹಂಚಬೇಕು. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ನಿರ್ದೇಶಕರು ಮತ್ತು ಮೀನುಗಾರಿಕೆ ಇಲಾಖೆಯ ನಿರ್ದೇಶಕರು ಸ್ಥಳೀಯ ಜನರೊಡನೆ ಹಾಗೂ ಜಿಲ್ಲಾಧಿಕಾರಿಯೊಡನೆ ಸಮಾಲೋಚನೆ ನಡೆಸಿ ಸದರಿ ಭೂಮಿಯನ್ನು ಪರಿಶೀಲಿಸಿ ವೈಜ್ಞಾನಿಕ ರೀತಿಯಲ್ಲಿ ಒಂದು ನಕ್ಷೆಯನ್ನು ತಯಾರಿಸಲು ಅವರಿಗೆ ಸೂಚನೆಯನ್ನು ನೀಡಲಾಗಿದೆ.

ಈ ಬಗ್ಗೆ ನಕ್ಷೆ ತಯಾರಿಸಲಾಗಿದೆಯೆಂದು ತಿಳಿದಿದೆ. ಈ ವಿಷಯ ಸ್ಥಳದಲ್ಲೇ ಪರಿಶೀಲನೆ ಮಾಡಿ ಒಂದು ಸಭೆಯನ್ನು ಸೇರಿಸಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಗಿದೆ. ಶೀಘ್ರದಲ್ಲಿಯೇ ಸ್ಥಳಕ್ಕೆ ಭೇಟಿ ಇತ್ತು ಈ ವಿಷಯಕ್ಕಾಗಿ ಅಂತಿಮ ತೀರ್ಮಾನವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಉಳ್ಳಾಲ ಪ್ರದೇಶದಲ್ಲಿ ಹಿಂದಿನ ಪರವಾನಗಿದಾರರು ಕಾನೂನು ರೀತ್ಯಾ ಕೊಡಬೇಕಾದ ಸ್ಥಳ ಬಾಡಿಗೆ, ದಂಡನೆ ಇತ್ಯಾದಿ ಪಾವತಿ ಮಾಡಲು ಬೇಕಾದಷ್ಟು ಸಮಯಾವಕಾಶ ಕೊಟ್ಟು ಬಳಿಕವೂ ಸ್ಥಳಬಾಡಿಗೆ ಇತ್ಯಾದಿ ಕೊಡದಿರುವ ಪ್ರಕರಣಗಳಲ್ಲಿ, ಇಂತಹವರನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

(೧೨) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೌಕರರಿಗೆ ಸಮಾನ ವೇತನ ನೀಡುವ ಬಗ್ಗೆ

ಶ್ರೀ ಕೆ. ಕುಶಾಲ.—ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೌಕರರಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದಿದ್ದರೂ ರಾಜ್ಯ ಸರ್ಕಾರ ತನ್ನ ಆದೇಶ ಎಚ್.ಯು.ಡಿ. ೨೨೧ ಕೆ.ಎಂ.ಆರ್. ೬೫ ದಿನಾಂಕ ೩-೪-೬೬ ರಲ್ಲಿ ಸಮಾನ ವೇತನ ಜಾರಿ ಮಾಡಬೇಕೆಂದು ಆದೇಶ ನೀಡಿದ್ದರೂ ಕ.ನ.ನೀ.ಸ. ಮತ್ತು ಒಳಚರಂಡಿ ಮಂಡಳಿ ತನ್ನ ನೌಕರರಿಗೆ ವೇತನ ಜಾರಿಗೊಳಿಸಿಲ್ಲ ಏಕೆ? ಈ ಮಂಡಳಿಯು ರಾಜ್ಯಸರ್ಕಾರದ ಅಧೀನದಲ್ಲಿಲ್ಲವೇ? ಈ ಜಲ ಮಂಡಳಿ ನೌಕರರು ತಮ್ಮ ಕೆಲಸಕ್ಕಾಗಿ ಮುಷ್ಕರಕ್ಕೆ ಕರೆ ನೀಡಿದಾಗ ಸರ್ಕಾರ ಕ್ರಮ ಕೈಗೊಳ್ಳದೆ ಇದ್ದುದರಿಂದ ನೌಕರರು ೧೦ ದಿವಸ ಉಪವಾಸ ಸತ್ಯಾಗ್ರಹ ಹೂಡಿ ತರುವಾಯ ೧ ದಿನದಲ್ಲಿ ರಾಜ್ಯಾದ್ಯಂತ ಹೆಚ್ಚಿನ ನಗರಗಳ ಜನರಿಗೆ ಕುಡಿಯಲು ನೀರಿಲ್ಲದೆ ತೊಂದರೆಯಾಯಿತು ಇದು ಸರ್ಕಾರದ ಬೇಜವಾಬ್ದಾರಿತನ ಅಲ್ಲವೆ? ಈ ನೌಕರರು ತಮ್ಮ ಬೇಡಿಕೆ ಈಡೇರಿಸಲು ಕೇಳಿಕೊಂಡಾಗ ಸರಕಾರ ಗಮನಹರಿಸದೆ ಇದ್ದಾಗ ನ್ಯಾಯಬದ್ಧವಾದ ಮುಷ್ಕರ ಹೂಡಿರುವಾಗ ಬೇಡಿಕೆ ಈಡೇರಿಸಲು ಸರಕಾರ ಸಂಪೂರ್ಣ ವಿಫಲವಾಗಿ ಇತ್ತೀಚೆಗೆ ನಡೆದ ಸಂಧಾನ ಮಾತುಕತೆಯಲ್ಲಿ ಮಾನ್ಯ ಕಾರ್ಮಿಕ ಮಂತ್ರಿಗಳು ಇಲ್ಲವೆಯೆ? ಸರ್ಕಾರದ ರಜೆ ಮುಂಜೂರು ಮಾಡಿದ್ದರೂ ಇವರುಗಳು ಕೆಲಸಕ್ಕೆ ಹಾಜರಾಗಿದ್ದರು. ಆದರೆ ಸರಕಾರವೇ ಕಾರಣವಲ್ಲವೆ? ಈ ನೌಕರರಿಗೆ ದುಡಿತದ ಬೋನಸ್ ಮತ್ತು ಪಿಂಚಣಿ ನೀಡದೆ ಇರಲು ಕಾರಣವೇನು? ಈ ಕರ್ನಾಟಕ ನಗರ ನೀರು